**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 598 ಗ್ರಾಪಂಕಾ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 25.09.2017.

**ಅಧಿಕೃತ ಜ್ಞಾಪನ**

**ವಿಷಯ:-** ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ಅಂತರ ಜಿಲ್ಲಾ ವರ್ಗಾವಣೆಯ ಬಗ್ಗೆ.

******

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 16–ಎ ರನ್ವಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳನ್ನು ಅವರ ಕೋರಿಕೆಯ ಮೇರೆಗೆ ಅವರು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯಿಂದ **ಚಾಮರಾಜನಗರ** ಜಿಲ್ಲೆಗೆ ಅಂತರ ಜಿಲ್ಲಾ ವರ್ಗಾವಣೆ ಮಾಡಿ, ಕೆಳಕಂಡ ಎಲ್ಲಾ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಡಿಸಿ ಆದೇಶಿಸಿದೆ.

| ಕ್ರ.ಸಂ. | ನೌಕರರ ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ವರ್ಗಾಯಿಸಿರುವ ಸ್ಥಳ |
|---|---|---|---|
| 1 | ಶ್ರೀ ಪುಟ್ಟಸ್ವಾಮಿ ಕೆ. | ಸಂಗಬೆಟ್ಟು ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಚಾಮರಾಜನಗರ ಜಿಲ್ಲೆ. |

**(ಮಾನ್ಯ ಮುಖ್ಯ ಮಂತ್ರಿರವರಿಂದ ಅನುಮೋದಿತ)**

**ಷರತ್ತುಗಳು:**

1. ಮೊದಲು ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯಲ್ಲಿನ ತಮ್ಮ ಜೇಷ್ಠತೆಯನ್ನು ಬಿಟ್ಟು ಕೊಡಲು ಹಾಗೂ ವರ್ಗಾವಣೆಗೊಂಡ ಜಿಲ್ಲೆಯಲ್ಲಿನ ತನ್ನ ವೃಂದದ ನೌಕರರ ಜೇಷ್ಠತಾ ಪಟ್ಟಿಯಲ್ಲಿ ಕೊನೆಯವನಾಗಿ ಸೇರ್ಪಡೆಗೊಳ್ಳಲು ಸಿದ್ದರಿರುವುದಾಗಿ ಲಿಖಿತವಾಗಿ ಒಪ್ಪಿಗೆ ನೀಡತಕ್ಕದ್ದು. ಯಾವ ಜಿಲ್ಲೆಗೆ ವರ್ಗಾವಣೆ ಆಗಿ ಹೋಗಬೇಕು ಆ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆದುಕೊಳ್ಳತಕ್ಕದ್ದು. ಇದನ್ನು ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳನ್ನು ಬಿಡುಗಡೆ ಮಾಡಬೇಕಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಲಿಖಿತವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.
2. ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವೃಂದದಲ್ಲಿ ಸದರಿ ನೌಕರರ ಪರಿವೀಕ್ಷಣಾವಧಿ ತೃಪ್ತಿಕರವಾಗಿ ಘೋಷಣೆಯಾಗಿರಬೇಕು.
3. ನೌಕರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಇರಬಾರದು ಹಾಗೂ ಹೂಡಲು ಉದ್ದೇಶಿಸಿರಬಾರದು.
4. ಇವರ ಜೇಷ್ಠತೆಯು ವರ್ಗಾವಣೆ ಹೊಂದಿದ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ ನಿಯಮಗಳು) ನಿಯಮಗಳು, 1957 ರ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
5. ಈ ನೌಕರರು ಯಾವುದೇ ವರ್ಗಾವಣೆ ಭತ್ಯೆ, ಪ್ರಯಾಣ ಭತ್ಯೆ ಹಾಗೂ ಸೇರುವಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
6. **ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವೃಂದದ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಹುದ್ದೆ ಲಭ್ಯವಿದ್ದಲ್ಲಿ ಮಾತ್ರ ಪರಿಗಣಿಸತಕ್ಕದ್ದು.**
7. ಯಾವುದೇ ಕಾರಣಕ್ಕೂ ಬಡ್ತಿ ಕೋಟಾದ ಹುದ್ದೆಯ ಎದುರು ಪರಿಗಣಿಸತಕ್ಕದ್ದಲ್ಲ.

8. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 16ಎ ರನ್ವಯ ಒಂದಕ್ಕಿಂತ ಹೆಚ್ಚು ಸಲ ಒಂದು ಜಿಲ್ಲಾ ವೃಂದದಿಂದ ಮತ್ತೊಂದು ಜಿಲ್ಲಾ ವೃಂದಕ್ಕೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ. ಈಗಾಗಲೇ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳು ಒಂದು ಬಾರಿ ಅಂತರ್ ಜಿಲ್ಲೆ ವರ್ಗಾವಣೆ ಆಗಿದ್ದರೆ ಮತ್ತೊಮ್ಮೆ ಪರಿಗಣಿಸಲು ಅವಕಾಶವಿರುವುದಿಲ್ಲ.

ಮೇಲಿನ ನಿಬಂಧನೆಗಳು ಪೂರೈಸುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಮಾತ್ರ ಸದರಿ ನೌಕರರನ್ನು ಅವರ ಹುದ್ದೆಯಿಂದ ಬಿಡುಗಡೆ ಮಾಡತಕ್ಕದ್ದು.

**(ಟಿ.ಪಿ. ಅರುಣ್‌ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, **ದಕ್ಷಿಣ ಕನ್ನಡ** ಮತ್ತು **ಚಾಮರಾಜನಗರ** ಜಿಲ್ಲಾ ಪಂಚಾಯತಿಗಳು.
2. ಮಾನ್ಯ ಮುಖ್ಯ ಮಂತ್ರಿರವರ ಪ್ರಧಾನ ಕಾರ್ಯದರ್ಶಿಗಳು ರವರ-ಮಾಹಿತಿಗಾಗಿ.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
5. ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.